ಶ್ರೀ ಪಿ. ವೆಂಕಟಗಿರಿಯಪ್ಪ.—ನಿಮ್ಮ ಈ ಕಾನೂನಿಂದ ಹರಿಜನರಿಗೆ ಮತ್ತು ಬಡಜನರಿಗೆ ಏನೂ ಪ್ರಯೋಜನವಾಗಿಲ್ಲವೆಂಬುದು ತಮಗೆ ಗೊತ್ತಿದೆಯೇ ?

ಶ್ರೀ ವಿ. ಎಲ್. ಪಾಟೀಲ್.—ಈ ಕಾನೂನುಗಳಿಂದಲೇ ಅವರು ಭೂಮಿಯ ಒಡೆಯರಾಗಿರುವುದು.

Sri G. DUGGAPPA.—You have stated that every effort is being made by Government to see that maximum benefit is given to poorer classes. May I know what are the specific efforts the Government is making ?

ಶ್ರೀ ವಿ. ಎಲ್. ಪಾಟೀಲ್.—ಇಷ್ಟೆಲ್ಲಾ ಸರ್ಕಾರದವರು ಹಣ ಖರ್ಚು ಮಾಡಿದ್ದು, ಅವರ ಸಾಮಾಜಿಕ, ಆರ್ಥಿಕ ಎಲ್ಲವನ್ನೂ ಉನ್ನತಗೊಳಿಸುವುದಕ್ಕೆ.

ಶ್ರೀ ಕೆ. ಪ್ರಭಾಕರ್.—ಜನರಲ್ ಸ್ಕೀಂನಲ್ಲಿ ಅವರಿಗೆ ಮ್ಯಾಕ್ಸಿಮಂ ಬೆನಿಫಿಟ್ ಹೋಗುತ್ತಿದೆ ಎಂದು ಹೇಳಿದ್ದಾರೆ. ಜನರಲ್ ಸ್ಕೀಂನ್ ಯಾವ್ಯಾವುದು, ಮತ್ತು ಮ್ಯಾಕ್ಸಿಮಂ, ಮಿನಿಮಂ ಎಂದು ಯಾವ ಆಧಾರದ ಮೇರೆ ಮಾಡಿದ್ದು, ಮತ್ತು ಮಿನಿಮಂ ಬೆನಿಫಿಟ್ ಯಾರಿಗೆ ಹೋಯಿತು ?

ಶ್ರೀ ವಿ. ಎಲ್. ಪಾಟೀಲ್.—ಹಣವನ್ನು ಖರ್ಚು ಮಾಡುವುದರಲ್ಲಿ ಹೆಚ್ಚು ಹೆಚ್ಚು ಹಣ ಅವರಿಗೆ ದೊರಕಿದೆ.

2-00 P.M.

Sri J. P. SARVESH.—In the rural areas, Harijans and other poorer sections are actually treated worse than slaves. Many of these Harijans are in possession of the Government lands since 10 to 11 years and they have developed the lands. Many of these Harijans are being evicted from those lands. Will the Government protect them and see that they are not evicted from their lands ?

ಶ್ರೀ ವಿ. ಎಲ್. ಪಾಟೀಲ್.—ಹರಿಜನರನ್ನು ಎಲ್ಲಿಂದ ರೀತಿ ಜಮೀನಿನಿಂದ ಎವಿಕ್ಟ್ ಮಾಡಿದ್ದಾರೆ ಹೇಗೆ ಮಾಡಿದ್ದಾರೆ ಎಂಬುದನ್ನು ಹೇಳಿದರೆ ಅದನ್ನು ಸರ್ಕಾರದವರು ಪರಿಶೀಲನೆ ಮಾಡುತ್ತಾರೆ.

Sri V. N. PATIL.—Will the Government see that pattas are made in their names since they are in possession of these lands for the last 20 to 30 years ?

ಶ್ರೀ ವಿ. ಎಲ್. ಪಾಟೀಲ್.—ಆ ಬಗ್ಗೆ ಪ್ರತ್ಯೇಕವಾದಂತಹ ಒಂದು ಅಪ್ಲಿಕೇಷನ್ ಅನ್ನು ಸರ್ಕಾರದ ಮುಂದೆ ತಂದರೆ ಅದನ್ನು ಪರಿಶೀಲನೆ ಮಾಡುತ್ತೇವೆ.

Promotions to I.A.S. Cadre on Recommendations of State Government

487. Sri V. L. SHIVAPPA (Tiptur).—

Will the Chief Minister be pleased to state :—

(*a*) the number of promotions recommended to I.A.S. cadre by the State Government to the Central Government, since the last 10 years ;

(*b*) the number of them sanctioned by the Central Government (Communitywise) ?